ಮಕ್ಕಳ ಕಲ್ಯಾಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.	ಸರ್ಕಾರ ವೆಚ್ಚ ಮಾಡುವ ಹಣ (ರೂ. ಲಕ್ಷಗಳಲ್ಲಿ)		
	ಕೇಂದ್ರ ಸರ್ಕಾರದಿಂದ	ರಾಜ್ಯ ಸರ್ಕಾರದಿಂದ	ಫಲಾನುಭವಿಗಳು
ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ:			
ಅ) ಅಪಾಯಕಾರಿಣಿಯರಿಗಾಗಿ	13954.01		33.85 ಲಕ್ಷ
ಆ) ಮೂರಕ ಪೌಷ್ಟಿಕ ಆಹಾರ		10532.20	
ಇ) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ	1836.71	--	33.85 ಲಕ್ಷ
ಈ) ಸರ್ವತಿಕ್ಷಣ ಅಭಿಯಾನದಡಿ			2844
ಶಾಲಾಪೂರ್ವ ಶಿಕ್ಷಣ ಕೇಂದ್ರಗಳು ಹಾಗೂ ಫಲಾನುಭವಿಗಳು	250.00	--	ಶಾ.ಪೂ.ಶಿ.ಕೇ.ದ ಫಲಾನುಭವಿಗಳು
2) ಬಾಲಿಕಾ ಸಮೃದ್ಧಿ ಯೋಜನೆ	--	--	32000
3) ಧೈರ್ಯ--ಸಾಹಸ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು ಮತ್ತು ಮಕ್ಕಳ ದಿನಾಚರಣೆ	0.68	--	34
4) ನಿರ್ಗತಿಕ ಮಕ್ಕಳ ಪಾಲನೆ/ಪೋಷಣೆ	--	379.95	8075
5) ಕಿಶೋರಿ ಶಕ್ತಿ ಯೋಜನೆ	41.80	--	6840
6) ಬಾಲಕಿಯರ ವಸತಿ ನಿಲಯ	--	30.00	645
7) ಗ್ರಾಮಾಂತರ ಹೆಣ್ಣುಮಕ್ಕಳಿಗೆ ಹಾಜರಾತಿ ಶಿಷ್ಯವೇತನ	--	86.00	25000
8) ಶಿಶುಪಾಲನಾ ಕೇಂದ್ರಗಳು	--	48.57	10775

1422(1604) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಾಬಯ್ಯಪ್ಪ (ಕುಂದಗೋಳ)ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?ಅ) ಧಾರವಾಡ ಕೆ.ಪಿ.ಸಿ ಬ್ಯಾಂಕ್ ಅವ್ಯವಹಾರದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ತನಿಖೆ ನಡೆಸಲಾಗಿದೆಯೇ?

ಇ) ತಪ್ಪಿತಸ್ಥರ ಮೇಲೆ ಕೈಗೊಳ್ಳಲಾದ ಕ್ರಮವೇನು?

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು): ಅ) ಹೌದು.

ಆ) ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಕಾಯ್ದೆ ಕಲಂ 64ರಡಿ ವಿಚಾರಣೆ ನಡೆಸಿ ಸಿವಿಲ್ ಪ್ರಕರಣಗಳನ್ನು ದಾಖಲಿಸಲಾಗಿದೆ.

ಇ) ಸಹಕಾರ ಸಂಘಗಳ ಕಾಯ್ದೆ ಕಲಂ 64ರ ವಿಚಾರಣೆ ಜರುಗಿ ಕಲಂ 68ರ ಆದೇಶದನ್ವಯ ಈಗಾಗಲೇ ಬ್ಯಾಂಕಿನ ವ್ಯವಹಾರದಲ್ಲಿ ನ್ಯೂನತೆ ಎಸಗಿರುವ ತಪ್ಪಿತಸ್ಥ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69ರಡಿ 4 ಸರ್‌ಚಾರ್ಜ್ ಪ್ರಕರಣ ದಾಖಲಿಸಲಾಗಿದ್ದು, ಸದರಿ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿ ಇರುತ್ತದೆ.

1426(1220) ಶ್ರೀ ಅಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಆಹಾರ ಮತ್ತು ನಾಗರೀಕ ಸಬರರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲಿ ಯಾವ ಯಾವ ಯೋಜನೆಯಡಿಯಲ್ಲಿ ಎಷ್ಟೆಷ್ಟು ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಆ) ಈ ಪೈಕಿ ಬಡತನ ರೇಖೆಗಿಂತ ಕೆಳಗಿರುವವರು ಎಷ್ಟು? (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

ಇ) ಹಾಗಿದ್ದಲ್ಲಿ ದೇವದುರ್ಗ ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕಡಿಮೆ ಇರುವ ಎಷ್ಟು ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. (ಹಾಗಿದ್ದಲ್ಲಿ ಹೆಸರು ವಿಳಾಸದೊಂದಿಗೆ ವಿವರವಾದ ಮಾಹಿತಿ ನೀಡಿರಿ)

ಈ) ವಿವಿಧ ಪಡಿತರಗಳು ಪ್ರತಿಯೊಂದು ಕೆ.ಜಿ. ಮತ್ತು ಲೀಟರ್‌ಗೆ ಫಲಾನುಭವಿಗಳು ಭರಿಸಬೇಕಾದ ಹಣವೆಷ್ಟು? (ವಿವರವಾದ ಮಾಹಿತಿ ನೀಡುವುದು)*

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ರಾಯಚೂರು ಜಿಲ್ಲೆಯಲ್ಲಿ ಡಿಸೆಂಬರ್ 2004ಕ್ಕೆ ಈ ಕೆಳಕಂಡಂತೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ:

ಅಂತ್ಯೋದಯ ಅನ್ನ ಯೋಜನೆಯ ಪಡಿತರ ಚೀಟಿಗಳು	:	36788
ಬಿ.ಪಿ.ಎಲ್. ಪಡಿತರ ಚೀಟಿಗಳು	:	157021
ಎ.ಪಿ.ಎಲ್. ಪಡಿತರ ಚೀಟಿಗಳು	:	142384

ಆ)	ತಾಲ್ಲೂಕು	ಎ.ಎ.ವೈ	ಬಿಪಿಎಲ್	ಒಟ್ಟು
1	ರಾಯಚೂರು (ಪಟ್ಟಣ)	5280	13447	18727
2	ರಾಯಚೂರು (ಗ್ರಾಮಾಂತರ)	5858	21478	27336
3	ಸಿಂದನೂರು	6436	37738	44174
4	ಮಾನವಿ	7402	29037	36439
5	ಲಿಂಗಸುಗೂರು	6000	32524	38524
6	ದೇವದುರ್ಗ	5812	22797	28609
	ಒಟ್ಟು	36788	157021	193809